# ಗೊದ್ದದಿಂದ ಕಲಾಕೃತಿ



ಧಾನ್ಯ, ಗೋಧಿ ಹುಲ್ಲು, ಕಾಳು ಮುಂತಾದ ನೈಸರ್ಗಿಕ ವಸ್ತುಗಳನ್ನು ಬಳಸಿ ಪೇಂಟಿಂಗ್ ರಚಿಸಿರುವುದನ್ನು ನಾವು ನೋಡಿರುತ್ತೇವೆ. ಹಲವಾರು ದಿನಗಳ ನಂತರ ಇರುವೆಯೋ, ಗೊದ್ದವೋ, ಗೆದ್ದಲೋ ತಿಂದು ಇಂತಹ ಕಲಾಕೃತಿಗಳು ಹಾಳಾಗಿ ಹೋಗುತ್ತವೆ. ಆದರೆ ಕ್ಯಾಲಿಫೋರ್ನಿಯಾದ ಕ್ಲಾರೆಮಾಂಟ್ ನಗರದ ಕಲಾವಿದನೊಬ್ಬ ಬಹುಶಃ ಯಾರೂ ಮಾಡಿರದ ವಿಚಿತ್ರ ಕಲಾಕೃತಿಯನ್ನು ರಚಿಸಿದ್ದಾನೆ. ಕ್ರಿಸ್ ಟ್ರೂ ಮ್ಯಾನ್ ಎಂಬಾತ ಬರೋಬ್ಬರಿ ಎರಡು ಲಕ್ಷ ಗೊದ್ದಗಳನ್ನು ಬಳಸಿಕೊಂಡು ಪೇಂಟಿಂಗ್ ರಚಿಸಿ ತನ್ನ ಕಲಾ ನೈಪುಣ್ಯ ಮೆರೆದಿದ್ದಾನೆ!

ಸೆಲ್ಫ್ ಪೋಟ್ರೈಟ್ ವಿತ್ ಗನ್ ಎಂದು ಹೆಸರಿಟ್ಟಿರುವ ಈ ಕಲಾಕೃತಿಯಲ್ಲಿ ಕೌಬಾಯ್ ರೀತಿಯಲ್ಲಿ ದಿರಿಸು ಧರಿಸಿ, ಕೈಯಲ್ಲಿ ತಂದೆಯ ರೈಫಲ್ ಹಿಡಿದಿರುವ ತಮ್ಮನ ಚಿತ್ರಣವಿದೆ. ದೂರದಿಂದ ನೋಡಿದರೆ ಮಾಸಲಾಗಿ ಹಳದಿ ಬಣ್ಣಕ್ಕೆ ತಿರುಗಿದ ಯಾವುದೂ ಹಳೇ ಕಾಲದ ಫೋಟೊ ಇರಬಹುದೇನೋ ಎನ್ನಿಸುತ್ತದೆ. ಆದರೆ ಹತ್ತಿರದಿಂದ ನೋಡಿದಾಗ ಇದು ಮಾಮೂಲಿ ಕಲಾಕೃತಿಯಾಗಿರದೇ ಗೊದ್ದಗಳಿಂದ ರಚಿತವಾಗಿರುವುದು ಖಚಿತವಾಗುತ್ತದೆ. ಕಲಾವಿದನ ಪ್ರಕಾರ, ಅಮೂರ್ತ ವಸ್ತುಗಳಿಂದ ಮನುಷ್ಯರು ಹೇಗೆ ಪಾಠ ಕಲಿಯುತ್ತಾರೆ ಹಾಗೂ ಅಂತಹ ವಸ್ತುಗಳಿಗೆ ಹತ್ತಿರವಾದಾಗ ಅವರ ಭಾವನೆಗಳು ಯಾವ ರೀತಿ ಬದಲಾವಣೆ ಹೊಂದುತ್ತವೆ ಎಂಬುದನ್ನು ಈ ವಿಶಿಷ್ಟ ಪೇಂಟಿಂಗ್ ವಿಷದ ಪಡಿಸುತ್ತದೆ!

ಗೊದ್ದದ ಮಾಸ್ಟರ್ ಪೀಸ್ ಅನ್ನು ರಚಿಸುವ ಕೆಲಸ ಸುಲಭದ್ದೇನಾಗಿರಲಿಲ್ಲ. ಏಕೆಂದರೆ ಜೀವಿಗಳನ್ನು ಕೊಲ್ಲುವುದನ್ನು ಕ್ರಿಸ್ ದ್ವೇಷಿಸುತ್ತಿದ್ದನಂತೆ. ಆದರೆ ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಬೇಕಾಗಿದ್ದ ಗೊದ್ದಗಳನ್ನು ತಾನೇ ಸಂಗ್ರಹಿಸ ಬೇಕೆಂದು ಬಯಸಿದ್ದನಂತೆ. ಆ ಕಾಲದಲ್ಲಿ ಅವನಿದ್ದ ಜಾಗದಲ್ಲಿದ್ದ ಗೊದ್ದಗಳು ತುಂಬಾ ಚಿಕ್ಕ ಚಿಕ್ಕ ಗಾತ್ರದಲ್ಲಿದ್ದವಂತೆ. ಆದ್ದರಿಂದ ಟ್ರೂಮ್ಯಾನ್ ಹಲ್ಲಿ ಆಹಾರಕ್ಕಾಗಿ ಗೊದ್ದಗಳನ್ನು ಮಾರುವವನಿಂದ ಆನ್‌ಲೈನ್ ಮುಖಾಂತರ ತರಿಸಿಕೊಂಡನಂತೆ. ನೇಲ್ ಪಾಲಿಷ್ ರಿಮೂವರ್ ಅನ್ನು ಹತ್ತಿ ಉಂಡೆಯಲ್ಲಿ ಅದ್ದಿ ಸಾಯಿಸಿದ ನಂತರ ಅವುಗಳನ್ನು ಚಿಮ್ಮಟದಿಂದ ಹಿಡಿದುಕೊಂಡು ಗಾಜಿನ ಕ್ಯಾನ್ವಾಸ್ ಮೇಲೆ ಗಮ್‌ನಿಂದ ಅಂಟಿಸುತ್ತಾ ಕಲಾಕೃತಿಯನ್ನು ರಚಿಸಿದನಂತೆ.

■ ವಿದ್ಯಾ ವಿ. ಹಾಲಭಾವಿ